ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,

ಪೊನ್ನಂಪೇಟೆ

**ಸಿ.ಸಿ. ನಂ.729/2024** **ಫ್ರಾ.ಸಾ –1**

**ಚಾ.ಸಾ – 1**

ದಿನಾಂಕಃ **16.10.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | : | ದೇಚಮ್ಮ |
| ಗಂಡನ ಹೆಸರು | : | ಯಶವಂತ್ |
| ವಯಸ್ಸು | : | 29 ವರ್ಷ |
| ಉದ್ಯೋಗ | : | Software Engineer |
| ವಾಸ ಸ್ಥಳ | : | ಪೊನ್ನಂಪೇಟೆ |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ಚಾಸಾ 2 ನನ್ನ ಗಂಡ. ಆರೋಪಿ ಗೊತ್ತು. 07.05.2023 ನನಗೂ ನನ್ನ ಗಂಡನಿಗೆ ನಮ್ಮ Whats app ಗೆ ಮೇಸೇಜ್ ಮಾಡಿ ಬೇದರಿಗೆ ಹಾಕಿರುತ್ತಾನೆ. ಅವರ ಹತ್ತಿರ ನನ್ನ ಸೆಕ್ಸ್ ವಿಡಿಯೋ ಇದೆ ಎಂದು ಹೇಳಿ ಮೇಸೇಜ್ ಮಾಡಿ ಬೆದರಿಸಿರುತ್ತಾನೆ. ಇದನ್ನು ಸೋಶೀಯಲ್ ಮೀಡಿಯಾದಲ್ಲಿ ಹಾಕಿ ವೈರಲ್ ಮಾಡುವುದಾಗಿ ಮೇಸೇಜ್ ನಲ್ಲಿ ಹೇಳಿದ. ಇದನ್ನು ನಿಲ್ಲಿಸಬೇಕು ಎಂದರೆ ಹಣ ಕೊಡಬೇಕೆಂದು ಮೇಸೇಜ್ ಹಾಕಿರುತ್ತಾನೆ. ನಾನು ಮತ್ತು ನನ್ನ ಗಂಡ ಇಂತಹ ಮೇಸೇಜ್ ಗಳನ್ನು ಕಳುಹಿಸಬೇಡ ಎಂದು ನಾವುಗಳು ಅವರಿಗೆ ಮೇಸೇಜ್ ಮಾಡಿರುತ್ತೇವೆ. ಯಾವುದೇ ಹಣ ಕೊಟ್ಟಿರುವುದಿಲ್ಲ. ಆರೋಪಿಯು ನನ್ನ ಹೆಸರಿನಲ್ಲಿ ಒಂದು ಪೇಸ್‌ಬುಕ್ ಅಕೌಂಟ್ Sheelu Dechamma ಎಂಬ ಹೆಸರಿನಲ್ಲಿ ತೆರೆದಿರುತ್ತಾನೆ. ಅದರಲ್ಲಿ ನನ್ನ ಮತ್ತು ನನ್ನ ಗಂಡನ ಫೊಟೋವನ್ನು ಹಾಕಿ ಸೆಕ್ಸ್ ವಿಡಿಯೋ ಇದೆ ಸೆಕ್ಸ್ ಫೋಟೋವನ್ನು ಹಾಕುತ್ತೇನೆ ಎಂದು ಪೋಸ್ಟ್ ಮಾಡಿರುತ್ತಾನೆ. ಈ ನನ್ನ ಅಕೌಂಟ್ ನಲ್ಲಿ ಅವರ ತುಂಬಾ ಸ್ನೇಹಿತರನ್ನು Add ಮಾಡಿರುತ್ತಾನೆ. ನನ್ನನ್ನು ಬಿಂಬಿಸಿ ನಾನು ಮೇಸೇಜ್ ಮಾಡುತ್ತಿರುವುದಾಗಿ ಆ ಫೇಸ್ ಬುಕ್ ಅಕೌಂಟ್ ನಲ್ಲಿ ಆರೋಪಿ ಮೇಸೇಜ್ ಗಳನ್ನು ಮಾಡಿರುತ್ತಾನೆ. ಈ ಅಕೌಂಟ್ ನಲ್ಲಿ ಅದರಲ್ಲಿದ್ದ ಸ್ನೇಹಿತರ list ರವರಿಗೆ ಗೊತ್ತಾಗುವಂತೆ ಆರೋಪಿ ನನ್ನ ಮತ್ತು ನನ್ನ ಗಂಡನ ಫೋನ್ ನಂಬರ್ ಹಾಕಿರುತ್ತಾನೆ.

ಇದೇ ಆರೋಪಿಯು ಇನ್ನೊಂದು ಹೆಸರಾದ Sharath Nelmakkada ಎಂಬ ಹೆಸರಿನಲ್ಲಿ ಫೇಸ್ ಬುಕ್ ಖಾತೆ ತೆರೆದಿರುತ್ತಾನೆ. ಈ ಅಕೌಂಟ್ ನಲ್ಲೂ ನನ್ನ ಬಗ್ಗೆ ಕೆಟ್ಟದಾಗಿ ಪೋಸ್ಟ್ ಮಾಡಿರುತ್ತಾನೆ. 21.06.2023 ರವರೆಗೂ ಆರೋಪಿಯು ಇದೇ ರೀತಿ ನಮಗೆ Whats app ನಲ್ಲಿ ಮೇಸೇಜ್ ಮಾಡಿಕೊಂಡು ಈ ಫೇಸ್ ಬುಕ್ ನಲ್ಲಿ ನಮ್ಮನ್ನು ಕೆಟ್ಟದಾಗಿ ಬಿಂಬಿಸಿರುತ್ತಾನೆ. ನಾನು ಮೊದಲಿಗೆ ಮಡಿಕೇರಿಯ CEN ಪೊಲೀಸರಿಗೆ ದೂರು ಕೊಟ್ಟೆ. ಆರೋಪಿಯ IP Address ನೋಡಿ ಆತ ದುಬೈ ನಲ್ಲಿರುವುದಾಗಿ ಹೇಳಿ ಕ್ರಮ ಕೈಗೊಳ್ಳಲಾಗುವುದಿಲ್ಲ ಎಂದು ಹೇಳಿರುತ್ತಾರೆ. ಇದನ್ನು ನಾವು SP ಮಡಿಕೇರಿ ಅವರಿಗೂ ಈ ಆರೋಪಿಯಿಂದ ತೊಂದರೆ ಆಗುತ್ತಿರುವುದು ಹೇಳಿರುತ್ತೇನೆ. ಆರೋಪಿಯ ತಂದೆ ತಾಯಿಯನ್ನು ಅವರ ಕಚೇರಿಗೆ ಕರೆಸಿ ಅವರ ಮಗನಿಗೆ ಬುದ್ದಿ ವಾದ ಹೇಳಲು ಹೇಳಿರುತ್ತಾರೆ. ಆದರೆ ಆರೋಪಿಯು ನವೆಂಬರ್ 2023 ಮತ್ತು ಮಾರ್ಚ್ 2024 ಪುನಃ ಇದೇ ರೀತಿ ಫೇಕ್ ಅಕೌಂಟ್ ಗಳನ್ನು ಕ್ರಿಯೇಟ್ ಮಾಡಿ ನನಗೂ ಮತ್ತು ನನ್ನ ಕುಟುಂಬದವರಿಗೂ ಮಾನಸಿಕ ಹಿಂಸೆ ಆಗುತ್ತಿದೆ. ಈ ಫೇಕ್ ಅಕೌಂಟ್ ಗಳಿಂದ ನಮಗೆ Friend request ಬಂದಿದ್ದು ಇವುಗಳ ಬಗ್ಗೆ ಗೊತ್ತಾಗಿರುತ್ತದೆ. 21.06.2023 ರಂದು ಪೊನ್ನಂಪೇಟೆ ಪೋಲೀಸರಿಗೆ ಆರೋಪಿಯ ವಿರುದ್ಧ ದೂರು ಕೊಟ್ಟೆ. ನಮ್ಮ ಮನೆಯಲ್ಲಿ ಪೋಲೀಸರ 24.06.2023 ರಂದು ಮನೆಗೆ ಬಂದು ಮಹಜರ್ ಮಾಡಿರುತ್ತಾರೆ. ಅದೇ ದಿನ ನಾನು ವಿರಾಜಪೇಟೆ ನ್ಯಾಯಾಲಯಕ್ಕೆ ಹೋಗಿ ನನ್ನ ಹೇಳಿಕೆ ಕೊಟ್ಟಿರುತ್ತೇನೆ. ಸಾಕ್ಷಿಯು CEN ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 1 ಎಂದು ಗುರುತಿಸಲಾಯಿತು. ಪೊನ್ನಂಪೇಟೆ ಪೋಲೀಸ್ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 2 ಮತ್ತು ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಮಹಜರ್ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 3 ಮತ್ತು ಸಹಿಯನ್ನು ನಿ.ಪಿ.3(ಎ) ಎಂದು ಗುರುತಿಸಲಾಯಿತು. 2 ಫೋಟೋಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 4 ಮತ್ತು 5 ಎಂದು ಗುರುತಿಸಲಾಯಿತು. ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

sd/-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ